# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 576
2. ಸದಸ್ಯರ ಹೆಸರು : ಶ್ರೀ ಮಧು.ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸ ಬೇಕಾದ ದಿನಾಂಕ : 11.12.2025
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಜಲ ಸಂಪನ್ಮೂಲ ಇಲಾಖೆಯಡಿಯಲ್ಲಿ ಬರುವ ನೀರು ಬಳಕೆದಾರರ ಸಹಕಾರ ಸಂಘಗಳ ಶೃಂಗ ಮಟ್ಟದ (ಅಪೆಕ್ಸ್) ಒಕ್ಕೂಟ ರಚನೆ ಸಂಬಂಧ ಈವರೆವಿಗೂ ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ಸಂಪೂರ್ಣ ಮಾಹಿತಿ ನೀಡುವುದು) | ಸಹಕಾರ ಸಂಘಗಳ ಶೃಂಗ ಮಟ್ಟದ (ಅಪೆಕ್ಸ್) ಒಕ್ಕೂಟ ರಚನೆ ಸಂಬಂಧ ಈ ಕೆಳಗಿನ ಕ್ರಮ ವಹಿಸಿರುತ್ತದೆ:<br>• 21 ಸದಸ್ಯರ ಅಪೆಕ್ಸ್ ಸಮಿತಿಯಲ್ಲಿ, ಚುನಾಯಿತರಲ್ಲದ 11 ಸದಸ್ಯರನ್ನು ಹೊರತುಪಡಿಸಿ, ಚುನಾಯಿಸಬೇಕಾದ ಸದಸ್ಯರನ್ನು ಶೃಂಗ ಮಹಾಮಂಡಳ ನೋಂದಣಿಯಾದ ಬಳಿಕ ಚುನಾವಣೆಗೆ ಕ್ರಮವಿಡಲಾಗುವುದು.<br>• ಕಾಡಾ ನಿರ್ದೇಶಕರನ್ನು ಮುಖ್ಯ ಕಾರ್ಯನಿರ್ವಾಹಕ ವ್ಯವಸ್ಥಾಪಕರಾಗಿ ನೇಮಿಸಲಾಗಿದೆ. ಸರ್ಕಾರದ ಪತ್ರ ಸಂಖ್ಯೆ:ಜಸಂಇ 93 ಸಿಎಎಂ 2024, ದಿನಾಂಕ:18.08.2025.<br>• ಪ್ರಸ್ತುತ, ಕರ್ನಾಟಕ ರಾಜ್ಯ ನೀರು ಬಳಕೆದಾರರ ಸಹಕಾರ ಸಂಘಗಳ ರಾಜ್ಯ ಮಟ್ಟದ ಶೃಂಗ ಮಹಾಮಂಡಳದ ಮುಖ್ಯ ಪ್ರವರ್ತಕರ ಆಯ್ಕೆಯಾಗಿದೆ.<br>• ಮುಖ್ಯಪ್ರವರ್ತಕರು ಪ್ರಸ್ತಾವನೆಯನ್ನು ನಿಬಂಧಕರು, ಸಹಕಾರ ಇಲಾಖೆ ರವರಿಗೆ ಸಲ್ಲಿಸಿದ್ದು, ನೋಂದಣಿ ಕಾರ್ಯದ ಪ್ರಕ್ರಿಯೆ ಜಾರಿಯಲ್ಲಿದೆ.<br>• ಕರ್ನಾಟಕ ರಾಜ್ಯ ನೀರು ಬಳಕೆದಾರರ ಸಹಕಾರ ಸಂಘಗಳ ರಾಜ್ಯ ಮಟ್ಟದ ಶೃಂಗ ಮಹಾಮಂಡಳದ ನೋಂದಣಿ, ಪತ್ರ ವ್ಯವಹಾರ, ಸಭೆಗಳನ್ನು ನಡೆಸಲು ಕೇಂದ್ರ ಕಛೇರಿಯನ್ನು ಸ್ಥಾಪಿಸುವ ಕುರಿತು ಪ್ರಕ್ರಿಯೆ ಜಾರಿಯಲ್ಲಿದೆ.<br>• ಸರ್ಕಾರದ ಪತ್ರ ಸಂಖ್ಯೆ:ಸಿಒ 86 ಪಿಎಂಸಿ 2025, ಬೆಂಗಳೂರು ದಿನಾಂಕ:07.08.2025 ರಲ್ಲಿ ರಾಜ್ಯ ಮಟ್ಟದ ಶೃಂಗ ಮಹಾಮಂಡಳಿ ನೋಂದಾಯಿಸಲು ಸಹಕಾರ ಸಂಘಗಳ ಕಾಯ್ದೆ 1959 ಕಲಂ 6(2) (ಬಿ-1) ವಿನಾಯಿತಿ ನೀಡಿ ಮಹಾಮಂಡಳಕ್ಕೆ ಮಾನ್ಯ ಜಲಸಂಪನ್ಮೂಲ ಸಚಿವರನ್ನು ಅಧ್ಯಕ್ಷರನ್ನಾಗಿ ಹಾಗೂ ಮಾನ್ಯ ಸಣ್ಣ ನೀರಾವರಿ ಸಚಿವರನ್ನು ಸಹ ಅಧ್ಯಕ್ಷರನ್ನಾಗಿ ಕರ್ನಾಟಕ ಸಹಕಾರ ಕಾಯ್ದೆ 1959 ಕಲಂ 29 ಎಫ್ ಗೆ ವಿನಾಯಿತಿ ನೀಡಿ ಆದೇಶಿಸಿದೆ. |
| ಆ) | ನೀರು ಬಳಕೆದಾರರ ಸಹಕಾರ ಸಂಘಗಳ ಫೆಡರೇಷನ್‌ಗಳಿಗೆ ವಾರ್ಷಿಕ 10 ಲಕ್ಷ ರೂಪಾಯಿಗಳನ್ನು ನೀಡುವ ಅಥವಾ ಒಂದು ಬಾರಿಗೆ ರೂ. 1 ಕೋಟಿ ಮೊತ್ತವನ್ನು ನೀಡುವ ಕುರಿತು ಸರ್ಕಾರದ ನಿಲುವೇನು: | ಕರ್ನಾಟಕ ರಾಜ್ಯ ನೀರು ಬಳಕೆದಾರರ ಸಹಕಾರ ಸಂಘಗಳ ರಾಜ್ಯ ಮಟ್ಟದ ಶೃಂಗ ಮಹಾಮಂಡಳ ಕಾರ್ಯರೂಪಕ್ಕೆ ಬಂದ ನಂತರ ನೀರು ಬಳಕೆದಾರರ ಸಹಕಾರ ಸಂಘಗಳ ಫೆಡರೇಷನ್‌ಗಳಿಗೆ ವಾರ್ಷಿಕ ಮೊತ್ತದ ನೀಡುವ ಕುರಿತು ಪರಿಶೀಲಿಸುವಾಗುವುದು. |

| | | |
|---|---|---|
| ಇ) | ಕಾರ್ಯನಿರತ ನೀರು ಬಳಕೆದಾರರ ಸಹಕಾರ ಸಂಘಗಳು ಪಿ.ಐ.ಎಂ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಅನುಕೂಲವಾಗುವಂತೆ ಪ್ರಸ್ತುತ ನೀಡುತ್ತಿರುವ ವಾರ್ಷಿಕ ಕಾರ್ಯಾನುದಾನ 1 ಲಕ್ಷ ರೂ. ಮೊತ್ತವನ್ನು ಹೆಚ್ಚಿಸಲು ತೆಗೆದುಕೊಂಡಿರುವ ಕ್ರಮವೇನು: | ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2ರ ಜಲಸಂಪನ್ಮೂಲ ಇಲಾಖೆಗೆ ಸಂಬಂಧಿಸಿದಂತೆ ಶಿಫಾರಸ್ಸಿನ ಕಂಡಿಕೆ ಸಂಖ್ಯೆ:5.5 ಸಹಭಾಗಿತ್ವ ನೀರಾವರಿ ನಿರ್ವಹಣೆ ಅಡಿಯಲ್ಲಿ ನೀ.ಬ.ಸ.ಸಂಘಗಳ ನಿರ್ವಹಣೆಗಾಗಿ ರೂ.2.00 ಲಕ್ಷಗಳ ವಾರ್ಷಿಕ ಕಾರ್ಯಾನುದಾನವನ್ನು ಹೆಚ್ಚಿಸುವ ಪ್ರಸ್ತಾವನೆಯು ಅನುಮೋದನೆಯಾಗಿದ್ದು, ಪ್ರಸ್ತುತ ಆರ್ಥಿಕ ಇಲಾಖೆಯ ಸಹಮತಿ ಪ್ರಕ್ರಿಯೆ ಜಾರಿಯಲ್ಲಿದೆ. |
| ಈ) | ನಿಗಮದ ವ್ಯಾಪ್ತಿಯ ಕೆರೆಗಳಲ್ಲಿ ಮೀನು ಹಿಡಿಯುವಿಕೆ ಮತ್ತು ಸಾಕಾಣಿಕೆಯನ್ನು ಮಹಾಮಂಡಳಗಳ ಉಸ್ತುವಾರಿಯಲ್ಲಿ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ವಹಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು: (ಸಂಪೂರ್ಣ ಮಾಹಿತಿ ನೀಡುವುದು) | ಪ್ರಸ್ತುತ, ಇಲಾಖೆಯ ವ್ಯಾಪ್ತಿಯಲ್ಲಿರುವ ಕೆರೆ, ಕಟ್ಟೆಗಳಲ್ಲಿನ ಮೀನು ಸಾಕಾಣಿಕೆ & ಹಿಡಿಯುವಿಕೆಯನ್ನು ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯಡಿಯಲ್ಲಿನ ಮಾರ್ಗಸೂಚಿಗಳನ್ವಯ ನಿರ್ವಹಿಸಲಾಗುತ್ತಿದೆ.<br><br>ಮುಂದುವರೆದು, ನೀರು ಬಳಕೆದಾರರ ಸಂಘಗಳಿಗೆ/ಮಹಾಮಂಡಳಿಗಳಿಗೆ ವಹಿಸುವ ಕುರಿತು ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆರವರೊಂದಿಗೆ ಸಮಾಲೋಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. |
| ಉ) | ವಾರ್ಷಿಕ ಗರಿಷ್ಟ ಎಷ್ಟು ಲಕ್ಷ ರೂಪಾಯಿವರೆಗಿನ ನಿರ್ವಹಣಾ ಕಾಮಗಾರಿಗಳನ್ನು ನೀರು ಬಳಕೆದಾರರ ಸಹಕಾರ ಸಂಘಗಳಿಗೆ ವಹಿಸಲು ಉದ್ದೇಶಿಸಲಾಗಿದೆ? (ವಿವರ ನೀಡುವುದು) | ಪ್ರಸ್ತುತ, ನೀರು ಬಳಕೆದಾರರ ಸಹಕಾರ ಸಂಘಗಳ ನಿರ್ವಹಣಾ ಕಾಮಗಾರಿಗಳಿಗಾಗಿ ವಾರ್ಷಿಕ ಗರಿಷ್ಟ ಮೊತ್ತವನ್ನು ನಿಗದಿಪಡಿಸಿರುವುದಿಲ್ಲ. |

**ಸಂಖ್ಯೆ: ಜಸಂಇ:167:ಸಿಎಂ:2025**

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿಗಳು